**ಸಾಕ್ಷಿಗೆ ದಿಃ27.02.2025 ರಂದು ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ  ಆರೋಪಿತರ ಪರ ಶ್ರೀ ಪಿಡಿ ವಕೀಲರಿಂದಃ**

6. ನಾನು ಬಾಲೇಪುರದ ರಾಜಣ್ಣನವರ ತೋಟದಲ್ಲಿ ಇದ್ದಾಗ ಗಲಾಟೆ ನಡೆಯಿತು. ಫ್ರಾಸಾ-1 ಮತ್ತು 3 ರವರಿಗೆ ಆರೋಪಿ ಹಲ್ಲೆ ಮಾಡಿದಾಗ ನಾನು ಸ್ಥಳದಲ್ಲಿ ಇರಲಿಲ್ಲ. ನಾನು ಫ್ರಾಸಾ-1 ಮತ್ತು 3 ರವರ ಮೇಲೆ ಗಲಾಟೆ ಆದಾಗ ನಾನು ಸ್ಥಳದಲ್ಲಿ ಇಲ್ಲದೇ ಇದ್ದುದ್ದರಿಂದ ಅಲ್ಲಿ ಏನಾಯಿತು ಎಂದು ನನಗೆ ಗೊತ್ತಿಲ್ಲ. ನನಗೆ ಆರೋಪಿ ಹಲ್ಲೆ

ಮಾಡಿದರು ಎಂದು ಹೇಳಲಾದ ಸ್ಥಳದಲ್ಲಿ ಹಾಗೂ ಸಮಯದಲ್ಲಿ ಫ್ರಾಸಾ-1 ಮತ್ತು ಫ್ರಾಸಾ-3 ರವರು ಹಾಜರು ಇರಲಿಲ್ಲ. ನನ್ನ ಮೇಲೆ ಗಲಾಟೆಯಾಗಿದೆ ಎಂದು ಹೇಳಲಾದ ಸಮಯ ಮಧ್ಯಾಹ್ನ 03.00 ಘಂಟೆ. ಜಗಳ ನಡೆದ ಬಗ್ಗೆ ನಾನು ತಕ್ಷಣ ಯಾರಿಗೂ ಹೇಳಲಿಲ್ಲ. ಗಲಾಟೆಯಾಗಿದೆ ಎಂದು ಹೇಳಲಾದ ದಿನ ನಾನು ಆಸ್ಪತ್ರೆಗೆ ಹೋಗಲಿಲ್ಲ ಮರುದಿನ ಹೋದೆನು. ನಾನು, ಫ್ರಾಸಾ-1 ಮತ್ತು ಫ್ರಾಸಾ-3 ಒಟ್ಟಿಗೆ ಆಸ್ಪತ್ರೆಗೆ ಹೋದೆವು ಎಂದರೆ ಸರಿ. ಆಸ್ಪತ್ರೆಗೆ ಹೋದ ನಂತರ ನಾವು ಮೂವರು ಠಾಣೆಗೆ ಹೋಗಿ ನಾವು ಮೂವರು ದೂರನ್ನು ಕೊಟ್ಟೆವು. ದೂರನ್ನು ನಾವು ಹೇಳಿದಂತೆ ಪೋಲಿಸರು ಬರೆದುಕೊಂಡರು. ದೂರಿಗೆ ನಾನು ಹೆಬ್ಬೆಟ್ಟಿನ ಸಹಿ ಮಾಡಿರುತ್ತೇನೆ.

7. ನಂತರ ಪೋಲಿಸರು ನನ್ನನ್ನು ಠಾಣೆಗೆ ಯಾವತ್ತೂ ಕರೆಸಿರುವುದಿಲ್ಲ. ನಂತರ ಪೋಲಿಸರು ಘಟನೆ ನಡೆದ ಮಾರನೇ ದಿನ ಸ್ಥಳಕ್ಕೆ ಬಂದಿದ್ದರು. ಪಂಚನಾಮೆ ಸಮಯದಲ್ಲಿ ಫ್ರಾಸಾ-1 ಮತ್ತು ಫ್ರಾಸಾ-3 ಹಾಜರಿದ್ದರು. ತಾವು ದೊಣ್ಣೆಯನ್ನು ಎತ್ತಿಕೊಟ್ಟಾಗ ಫ್ರಾಸಾ-1 ಮತ್ತು ಫ್ರಾಸಾ-3 ಸ್ಥಳದಲ್ಲಿ ಹಾಜರಿದ್ದರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಮೇಲೆ ಜಗಳ ಆಗಿದ್ದ ಸ್ಥಳವೇ ಬೇರೆ ಹಾಗೂ ಅವರ ಮೇಲೆ ಜಗಳ ಆಗಿದ್ದ ಸ್ಥಳವೇ ಬೇರೆ ಎಂದು ಹೇಳುತ್ತಾರೆ. ಫ್ರಾಸಾ1 ಮತ್ತು 3 ಇವರು ಪೋಲಿಸರಿಗೆ ಎಷ್ಟು ದೊಣ್ಣೆ ಎತ್ತಿಕೊಟ್ಟರು ಎಂದು ನನಗೆ ಗೊತ್ತಿಲ್ಲ. ಮು.ಮಾ-1 ಮತ್ತು 2 ರಂತಹ ದೊಣ್ಣೆಗಳು ಊರಿನಲ್ಲಿ ಸಾಕಷ್ಟು ಬಿದ್ದಿರುತ್ತವೆ ಎಂದರೆ ಸರಿಯಲ್ಲ.

8. ಘಟನೆಯ ನಂತರ ನಾನು ಬಾಲೇಪುರದ ರಾಜಣ್ಣರವರ ಮನೆಗೆ ಹೋಗಿದ್ದೆನು. ಬಾಲೇಪುರದ ರಾಜಣ್ಣ ಗ್ರಾಮಪಂಚಾಯ್ತಿ ಸದಸ್ಯರಾಗಿರುತ್ತಾರೆ. ಬಾಲೇಪುರದ ರಾಜಣ್ಣರವರ ತೋಟ ಹಾಗೂ ಆರೋಪಿಯ ತೋಟಕ್ಕೂ ಅರ್ಧ ಕಿಮೀ ಅಂತರ ಇರುತ್ತದೆ. ಬಾಲೇಪುರದ ರಾಜಣ್ಣ ಇವರ ತೋಟಕ್ಕೆ ನಾನು ಹೋದ ವಿಚಾರ ಆರೋಪಿಗೆ ಹೇಗೆ ಗೊತ್ತಾಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದೇ ಒಂದೇ ದಾರಿಯಲ್ಲಿ ಬರುವುದರಿಂದ ನನ್ನನ್ನು ನೋಡಿ ನಾನಿದ್ದ ಸ್ಥಳಕ್ಕೆ ಬಂದಿದ್ದರು ಎಂದು ಹೇಳುತ್ತಾರೆ. ಆರೋಪಿಯು ನನ್ನ ಜೊತೆ ಗಲಾಟೆ ಮಾಡಿದ ಎಂದು ಹೇಳಿದಾಗ ಬಾಲೇಪುರದ

ರಾಜಣ್ಣರವರ ತಮ್ಮ ಚಂದ್ರ ಹಾಜರಿದ್ದು ಗಲಾಟೆ ಬಿಡಿಸಲು ಪ್ರಯತ್ನಿಸಿದರು ಎಂದು ಹೇಳುತ್ತಾರೆ. ಸ್ಥಳದಲ್ಲಿ ಗಲಾಟೆಯ ಸಮಯದಲ್ಲಿ ನಾನು, ಆರೋಪಿ ಹಾಗೂ ಸದರಿ ಚಂದ್ರಪ್ಪ ಇವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ.

9. ಬಾಲೇಪುರದ ರಾಜಣ್ಣರವರ ತೋಟಕ್ಕೆ ಫೆನ್ಸಿಂಗ್ ಇದ್ದು ಗೇಟ್ ಇರುತ್ತದೆ. ಸ್ಥಳದಲ್ಲಿ ಚಂದ್ರ ಇದ್ದ ಬಗ್ಗೆ ದೂರಿನಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಗಲಾಟೆಯಲ್ಲಿ ನನಗೆ ಕಾಲಿಗೆ ಹಾಗೂ ಬೆನ್ನಿಗೆ ಏಟಾಗಿದೆ.

(ಈ ಹಂತದಲ್ಲಿ ಬೆಳಗಿನ ಕಾಲಾವಧಿ ಮುಗಿದಿದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**<u>ಸಾಕ್ಷಿಗೆ ಮಧ್ಯಾಹ್ನ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಪಿಡಿ ವಕೀಲರಿಂದಃ</u>**

10. ನಾನು ತೋಟಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಬಾಲೇಪುರದ ರಾಜಣ್ಣ ಇವರ ತೋಟಕ್ಕೆ ನಾನು ಕೂಲಿ ಕೆಲಸಕ್ಕೆ ಹೋಗುತ್ತೇನೆ. ಆರೋಪಿಯ ತೋಟಕ್ಕೆ ಮುಂಚೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆವು ಈಗ ಅವರ ತೋಟಕ್ಕೆ ಕೂಲಿ ಕೆಲಸಕ್ಕೆ ಹೋಗುವುದಿಲ್ಲ. ನಾವು ಆರೋಪಿಗೆ, ರೇಷ್ಮೆ ಹುಳುಗಳನ್ನು ಬಿಡಿಸಲು ಹಾಗೂ ತೋಟದ ಕೆಲಸ

ಮಾಡುತ್ತೇವೆ ಎಂದು ಕೂಲಿ ಕೆಲಸ ಕೇಳಿದೆವು ಎಂದರೆ ಸರಿಯಲ್ಲ. ಆರೋಪಿ ನಮಗೆ, ನೀವು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಕೂಲಿ ಕೊಡಲು ನಿರಾಕರಿಸಿದ ನಂತರ ಆರೋಪಿತನಿಗೆ ಹಾಗೂ ನಮಗೆ ವೈ ಮನಸ್ಸು ಇತ್ತು ಎಂದರೆ ಸರಿಯಲ್ಲ. ಬಾಲೇಪುರದ ರಾಜಣ್ಣ ಹಾಗೂ ಆರೋಪಿಗೂ ನಡುವೆ ಆಸ್ತಿ ವಿವಾದ ಇದ್ದುದ್ದರಿಂದ ಅವರು ನಮ್ಮ ಮೂಲಕ ಈ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ನನ್ನ ವಿರುದ್ಧ ಯಾವುದೇ ಕೃತ್ಯಗಳನ್ನು ಎಸಗದೇ ಇದ್ದರೂ ಸಹ ನಾವು ಮತ್ತು ಬಾಲೇಪುರದ ರಾಜಣ್ಣ ಷಾಮೀಲಾಗಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಾದ ನಂತರ ನಮಗೆ ಸರ್ಕಾರದಿಂದ ಪರಿಹಾರ ಹಣ ಬಂದಿರುತ್ತದೆ ಎಂದರೆ ಸರಿ. ಸರ್ಕಾರದಿಂದ ಪರಿಹಾರದ ಹಣ ಬರುತ್ತದೆ ಎಂದು ಬಾಲೇಪುರದ ರಾಜಣ್ಣ ಇವರು ನಮ್ಮ ಮೂಲಕ ಸುಳ್ಳು ದೂರನ್ನು ಕೊಡಿಸಿ ಪರಿಹಾರವನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದ ಕಾರಣ ಅದೇ ದಿನ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ ಹಾಗೂ ಅದೇ ದಿನ ಠಾಣೆಗೆ ಹೋಗಿ ನಾವು ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋಗದೇ ಇದ್ದುದರಿಂದ ದೂರಿನಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳಕ್ಕೆ ಪೋಲಿಸರು ಬಂದಿಲ್ಲ ಹಾಗೂ ಪೋಲಿಸರು ಪಂಚನಾಮೆಯನ್ನು ಮಾಡಿಲ್ಲ ಹಾಗೂ ನಾನು ಕೋಲನ್ನು ಎತ್ತಿಕೊಟ್ಟಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು